**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು–560001.**

ಸಂಖ್ಯೆ: ಸಿ1(7) ವ.ನಿ.ಪ :567102/2021–22 ದಿನಾಂಕ:–28–09–2021

ಉಪನಿರ್ದೇಶಕರು (ಆಡಳಿತ)/ಪ್ರಾಂಶುಪಾಲರು, ಸಿ.ಟಿ.ಇ/ಡಯಟ್,

ಸಾರ್ವಜನಿಕ ಶಿಕ್ಷಣ ಇಲಾಖೆ,

**"ಅತೀ ಜರೂರು"**

.............................................................. ಜಿಲ್ಲೆ.

ಮಾನ್ಯರೇ,

ವಿಷಯ: 2022 ನೇ ವರ್ಷದಲ್ಲಿ (ದಿನಾಂಕ : 01–01–2022 ರಿಂದ 31–12–2022 ರ ಅವಧಿಯಲ್ಲಿ) 60 ವರ್ಷ ವಯೋಮಿತಿ ಪೂರೈಸಿ, ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕ ವರ್ಗದ ಗ್ರೂಪ್–'ಎ' ಅಧಿಕಾರಿಗಳ ಮತ್ತು Officiating ಆಗಿರುವ ಬೋಧಕ ವೃಂದದ ಗ್ರೂಪ್–'ಬಿ' ಮತ್ತು ತತ್ಸಮಾನ ವೃಂದದ ಅಧಿಕಾರಿಗಳ ಮಾಹಿತಿ ಕಳುಹಿಸಿಕೊಡುವ ಬಗ್ಗೆ.

–*–*–*–*–*–

2022 ನೇ ವರ್ಷದಲ್ಲಿ (ದಿನಾಂಕ : 01–01–2022 ರಿಂದ 31–12–2022 ರ ಅವಧಿಯಲ್ಲಿ) 60 ವರ್ಷ ವಯೋಮಿತಿ ಪೂರೈಸಿ ಸರ್ಕಾರಿ ಸೇವೆಯಿಂದ ನಿವೃತ್ತರಾಗಲಿರುವ, ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕ ವೃಂದದ ಗ್ರೂಪ್–'ಎ' ಅಧಿಕಾರಿಗಳ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿ ಅಧಿಕೃತ ಅನುಮತಿಯನ್ನು ಪಡೆಯಬೇಕಾಗಿರುತ್ತದೆ. ಮತ್ತು Officiating ಆಗಿರುವ ಬೋಧಕ ವೃಂದದ ಗ್ರೂಪ್–'ಬಿ' ಮತ್ತು ತತ್ಸಮಾನ ವೃಂದದ ಅಧಿಕಾರಿಗಳ ನಿವೃತ್ತಿ ಪಟ್ಟಿಯನ್ನು ಈ ಕಛೇರಿ ಹಂತದಲ್ಲಿ ಪ್ರಕಟಿಸಬೇಕಾಗಿರುತ್ತದೆ.

ಆದುದರಿಂದ ನಿಮ್ಮ ಕಛೇರಿಯಲ್ಲಿ/ ಜಿಲ್ಲಾ ವ್ಯಾಪ್ತಿಯಲ್ಲಿ, 2022 ನೇ ವರ್ಷದಲ್ಲಿ ಸೇವೆಯಿಂದ ನಿವೃತ್ತರಾಗಲಿರುವ ಗ್ರೂಪ್–'ಎ' ವೃಂದದ ಅಧಿಕಾರಿಗಳ ಮತ್ತು Officiating ಆಗಿರುವ ಬೋಧಕ ವೃಂದದ ಗ್ರೂಪ್–'ಬಿ' ಮತ್ತು ತತ್ಸಮಾನ ವೃಂದದ ಅಧಿಕಾರಿಗಳ ಬಗೆಗಿನ ಮಾಹಿತಿಯನ್ನು **"ಲಗತ್ತಿಸಿರುವ ನಮೂನೆಯಲ್ಲಿ"** ಕ್ರೋಢೀಕರಿಸಿ ಈ ಕಛೇರಿಗೆ ಕಳುಹಿಸಲು ತಿಳಿಸಿದೆ.

ನಿವೃತ್ತರಾಗಲಿರುವ ಅಧಿಕಾರಿಗಳ ಸೇವಾಪುಸ್ತಕ ಮತ್ತು ಇನ್ನಿತರೆ ದಾಖಲೆಗಳನ್ನು ಪರಿಶೀಲಿಸಿ, ಜನ್ಮ ದಿನಾಂಕ ಮತ್ತು ವಯೋನಿವೃತ್ತಿ ದಿನಾಂಕಗಳನ್ನು ಕರಾರುವಕ್ಕಾಗಿ ನಮೂದಿಸಿ ಕಳುಹಿಸಲು ತಿಳಿಸಿದೆ. ಮಾಹಿತಿ ನೀಡಿದ ನಂತರ ನಿವೃತ್ತರಾಗುವ ಅಧಿಕಾರಿಗಳು ವರ್ಗಾವಣೆಗೊಂಡರೆ, ವರ್ಗಾವಣೆಗೊಂಡ ಸ್ಥಳದ ಬಗ್ಗೆ ಮಾಹಿತಿಯನ್ನು ಸಹಾ ತಿಳಿಸುವುದು.

ಕ್ರೋಢೀಕೃತ ಮಾಹಿತಿಯನ್ನು ದಿನಾಂಕ :–31–10–2021 ರ ಒಳಗಾಗಿ ಶ್ರೀ ಪುರುಷೋತ್ತಮ ಕುಮಾರ.ಕೆ.ಎಂ, ಹಿರಿಯ ಸಹಾಯಕ ನಿರ್ದೇಶಕರು, ಸಿಬ್ಬಂದಿ ಶಾಖೆ–1, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು–560001. ಇವರ ಹೆಸರಿಗೆ ಮುದ್ದಾಂ/ನೊಂದಣಿ ಅಂಚೆ ಹಾಗೂ ಜಿ–ಮೇಲ್: est1cpi@gmail.com ಮೂಲಕ ಕಳುಹಿಸಲು ತಿಳಿಸಿದೆ. ನಿವೃತ್ತರಾಗುವವರು ಯಾರೂ ಇಲ್ಲದಿದ್ದರೆ "ಶೂನ್ಯ ವರದಿ" ಎಂದು ಸಲ್ಲಿಸತಕ್ಕದ್ದು.

- **ಇದು ಅತೀ ಜರೂರು ಎಂದು ಪರಿಗಣಿಸಿ ಮಾಹಿತಿಯನ್ನು ಸಲ್ಲಿಸತಕ್ಕದ್ದು.**
- **ನಮೂನೆಯಲ್ಲಿ ದಾಖಲಿಸಿರುವ ದೃಢೀಕರಣವನ್ನು ತಪ್ಪದೇ ನಮೂದಿಸಿ ಮಾಹಿತಿಯನ್ನು ಪರಿಶೀಲಿಸಿ ಸಲ್ಲಿಸುವುದು.**

ತಮ್ಮ ನಂಬುಗೆಯ,

ಡಾ.ರೂಪಶ್ರೀ.ಎಸ್,ಕೆ.ಎ.ಎಸ್.,

ಜಂಟಿ ನಿರ್ದೇಶಕರು(ಆಡಳಿತ)

ಪ್ರತಿಯನ್ನು :

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ – ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
2. ರಾಜ್ಯದ ಎಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
3. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.

## ನಮೂನೆ-1

2022 ನೇ ವರ್ಷದಲ್ಲಿ (ದಿನಾಂಕ : 01-01-2022 ರಿಂದ 31-12-2022 ರ ಅವಧಿಯಲ್ಲಿ) ನಿವೃತ್ತರಾಗಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಬೋಧಕ ವರ್ಗದ ಗ್ರೂಪ್-'ಎ' ಅಧಿಕಾರಿಗಳ ಬಗೆಗಿನ ವಿವರಗಳು :

| ಕ್ರ ಸಂ | ಅಧಿಕಾರಿಗಳ ಹೆಸರು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಛೇರಿಯ/ ಸಂಸ್ಥೆಯ ಪೂರ್ಣ ವಿಳಾಸ | ಜನ್ಮ ದಿನಾಂಕ | ನಿವೃತ್ತಿ ದಿನಾಂಕ | ಷರಾ |
|---|---|---|---|---|
| | | | | |

1. ಮೇಲ್ಕಂಡ ಅಧಿಕಾರಿಗಳ ಜನ್ಮ ದಿನಾಂಕದ ಬಗ್ಗೆ ದಿನ, ತಿಂಗಳು ಮತ್ತು ವರ್ಷ ಈ ಬಗ್ಗೆ ಖುದ್ದಾಗಿ ಪರಿಶೀಲಿಸಿ ನಿವೃತ್ತಿ ದಿನಾಂಕವನ್ನು ನಮೂದಿಸಲಾಗಿದೆ ಇದರಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. **ಮತ್ತು**
2. ಈ ಪಟ್ಟಿಯಲ್ಲಿ 2022 ನೇ ವರ್ಷದಲ್ಲಿ ನಿವೃತ್ತಿಯಾಗಲಿರುವ ಎಲ್ಲಾ ಅಧಿಕಾರಿಗಳ ಹೆಸರುಗಳನ್ನು ಸೇರ್ಪಡೆಗೊಳಿಸಲಾಗಿದೆ ಯಾವ ಅಧಿಕಾರಿಗಳ ಹೆಸರನ್ನು ಕೈಬಿಟ್ಟಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

(ಸಹಿ ಮತ್ತು ಕಛೇರಿಯ ಮೊಹರು)

## ನಮೂನೆ-2

2022 ನೇ ವರ್ಷದಲ್ಲಿ (ದಿನಾಂಕ : 01-01-2022 ರಿಂದ 31-12-2022 ರ ಅವಧಿಯಲ್ಲಿ) ನಿವೃತ್ತರಾಗಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ Officiating ಆಗಿರುವ ಬೋಧಕ ವೃಂದದ ಗ್ರೂಪ್-'ಬಿ' ಮತ್ತು ತತ್ಸಮಾನ ವೃಂದದ ಅಧಿಕಾರಿಗಳ ಬಗೆಗಿನ ವಿವರಗಳು :

| ಕ್ರ ಸಂ | ಅಧಿಕಾರಿಗಳ ಹೆಸರು ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಛೇರಿಯ/ ಸಂಸ್ಥೆಯ ಪೂರ್ಣ ವಿಳಾಸ | ಜನ್ಮ ದಿನಾಂಕ | ನಿವೃತ್ತಿ ದಿನಾಂಕ | ಷರಾ |
|---|---|---|---|---|
| | | | | |

1. ಮೇಲ್ಕಂಡ ಅಧಿಕಾರಿಗಳ ಜನ್ಮ ದಿನಾಂಕದ ಬಗ್ಗೆ ದಿನ, ತಿಂಗಳು ಮತ್ತು ವರ್ಷ ಈ ಬಗ್ಗೆ ಖುದ್ದಾಗಿ ಪರಿಶೀಲಿಸಿ ನಿವೃತ್ತಿ ದಿನಾಂಕವನ್ನು ನಮೂದಿಸಲಾಗಿದೆ ಇದರಲ್ಲಿ ಯಾವುದೇ ಬದಲಾವಣೆಗಳು ಇರುವುದಿಲ್ಲ. **ಮತ್ತು**
2. ಈ ಪಟ್ಟಿಯಲ್ಲಿ 2021 ನೇ ವರ್ಷದಲ್ಲಿ ನಿವೃತ್ತಿಯಾಗಲಿರುವ ಎಲ್ಲಾ ಅಧಿಕಾರಿಗಳ ಹೆಸರುಗಳನ್ನು ಸೇರ್ಪಡೆಗೊಳಿಸಲಾಗಿದೆ ಯಾವ ಅಧಿಕಾರಿಗಳ ಹೆಸರನ್ನು ಕೈಬಿಟ್ಟಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

(ಸಹಿ ಮತ್ತು ಕಛೇರಿಯ ಮೊಹರು)